# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ. ಸುನೀಲ್ ಸುಬ್ರಮಣಿ, ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 982 (1125) |
| ಉತ್ತರಿಸಬೇಕಾದ ದಿನಾಂಕ | 21.09.2021 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆ ಮಡಿಕೇರಿಯ ನಗರಸಭೆ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿರುವ ಯುಜಿಡಿ ಕಾಮಗಾರಿಯು ಸಂಪೂರ್ಣವಾಗಿ ಅನುಷ್ಠಾನಗೊಂಡಿದೆಯೇ; ಇದ್ದಲ್ಲಿ, ಯಾವಾಗ ಅನುಷ್ಠಾನಗೊಂಡಿದೆ; | ಕೊಡಗು ಜಿಲ್ಲೆ ಮಡಿಕೇರಿ ನಗರಸಭೆ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿರುವ ಒಳಚರಂಡಿ (ಯುಜಿಡಿ) ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಮಡಿಕೇರಿ ನಗರಸಭಾ ವ್ಯಾಪ್ತಿಯಲ್ಲಿ ಅಳವಡಿಸಬೇಕಾಗಿರುವ 109.10 ಕಿ.ಮೀ ಉದ್ದದ ಒಳಚರಂಡಿ ಕೊಳವೆ ಮಾರ್ಗದ ಪೈಕಿ ಈವರೆಗೂ 69 ಕಿ.ಮೀ ಉದ್ದದಷ್ಟು ಕೊಳವೆ ಮಾರ್ಗವನ್ನು, 3400 ಒಳಚರಂಡಿ ಗೃಹ ಸಂಪರ್ಕಗಳನ್ನು ಅಳವಡಿಸಿದ್ದು ಹಾಗೂ ನಗರದ ಗಾಲ್ಫ್ ಗ್ರೌಂಡ್ ಹತ್ತಿರ 3.0 ಎಂ.ಎಲ್.ಡಿ ಸಾಮರ್ಥ್ಯದ ಮಲೀನ ನೀರು ಶುದ್ದೀಕರಣ ಘಟಕದ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಉಳಿಕೆ ಕಾಮಗಾರಿಗಳನ್ನು ಅಕ್ಟೋಬರ್-2022 ರೊಳಗೆ ಪೂರ್ಣಗೊಳಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. |
| ಆ) | ಈ ಕಾಮಗಾರಿಯು ಅನುಷ್ಠಾನಗೊಳ್ಳದಿದ್ದಲ್ಲಿ, ಇದಕ್ಕೆ ಕಾರಣಗಳೇನು; ಈ ಕಾಮಗಾರಿಯ ಪ್ರಗತಿ ಕಾರ್ಯ ಯಾವ ಹಂತದಲ್ಲಿದೆ; ಇಲ್ಲಿಯವರೆಗೂ ಪೂರ್ಣವಾಗದಿರುವುದಕ್ಕೆ ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು) | 1. ಮಡಿಕೇರಿ ಒಳಚರಂಡಿ ಯೋಜನೆಯನ್ನು ನಿಗದಿತ ಅವಧಿಯೊಳಗೆ ಅನುಷ್ಠಾನಗೊಳ್ಳದಿರಲು ಕಾರಣಗಳು ಈ ಕೆಳಗಿನಂತಿವೆ.<br>➢ ಮಡಿಕೇರಿ ಒಳಚರಂಡಿ ಯೋಜನೆಯಡಿ ಒಟ್ಟು 109.10 ಕಿ.ಮೀ ಉದ್ದದ ಒಳಚರಂಡಿ ಕೊಳವೆ ಮಾರ್ಗಗಳನ್ನು ಅಳವಡಿಸಲು ಅನುವು ಮಾಡಲಾಗಿದ್ದು, ಸೆಪ್ಟಿಕ್ ಟ್ಯಾಂಕ್ ವಲಯಗಳನ್ನು ಹೊರತುಪಡಿಸಿ 85 ಕಿ.ಮೀ ಉದ್ದದ ಒಳಚರಂಡಿ ಕೊಳವೆ ಮಾರ್ಗವನ್ನು ಅಳವಡಿಸಬೇಕಾಗಿರುತ್ತದೆ. ಈ ಪೈಕಿ ಪ್ರಸ್ತುತ 69 ಕಿ.ಮೀ ರಷ್ಟು ಕೊಳವೆ ಮಾರ್ಗವನ್ನು ಅಳವಡಿಸಲಾಗಿದ್ದು, ಉಳಿದ 17 ಕಿ.ಮೀ ಉದ್ದದಷ್ಟು ಕೊಳವೆ ಮಾರ್ಗವನ್ನು ಕಾಂಕ್ರೀಟ್ ಹಾಗೂ ಡಾಂಬರು ರಸ್ತೆಗಳನ್ನು ಕತ್ತರಿಸಿ ಅಳವಡಿಸಲು ಸ್ಥಳೀಯರಿಂದ ತಕರಾರು ಇರುತ್ತದೆ ಹಾಗೂ ನಗರದ ಮುಖ್ಯ ನಾಲೆಯ ಬದಿಯಲ್ಲಿ 900 ಮೀ. ಉದ್ದದಷ್ಟು ಮುಖ್ಯ ಕೊಳವೆ ಸಾಲುಗಳನ್ನು |

ಅಳವಡಿಸಲು ಗಡಿ ಗುರುತಿಸದಿಲ್ಲದಿರುವುದರಿಂದ ಮುಖ್ಯ ಕೊಳವೆ ಮಾರ್ಗವನ್ನು ಅಳವಡಿಸಲು ಸಾಧ್ಯವಾಗಿರುವುದಿಲ್ಲ.

- ನಗರದ ರಾಜಶೇಖರ್ ಹೋಂ ನೀಡ್ಸ್ ಬಳಿ ವೆಟ್ ವೆಲ್ ನಿರ್ಮಾಣದ ಕಾಮಗಾರಿಗೆ ಅವಶ್ಯವಿರುವ 0.14 ಎಕರೆ ವಿಸ್ತೀರ್ಣದ ಜಾಗವನ್ನು ನಗರಸಭೆ ವತಿಯಿಂದ ಮಂಡಳಿಗೆ ಹಸ್ತಾಂತರಿಸಬೇಕಾಗಿದೆ.
- ನಗರದ ಭೌಗೋಳಿಕ ಸ್ಥಿತಿಗನುಸಾರವಾಗಿ ಒಟ್ಟು 09 ಸೆಪ್ಟಿಕ್ ಟ್ಯಾಂಕ್‌ಗಳನ್ನು ನಿರ್ಮಿಸಲು ಅವಶ್ಯವಿರುವ ಜಾಗಗಳನ್ನು ನಗರಸಭೆ ವತಿಯಿಂದ ಮಂಡಳಿಗೆ ಹಸ್ತಾಂತರಿಸಬೇಕಾಗಿದೆ.
- ಮಡಿಕೇರಿ ನಗರದ ಗಾಲ್ಫ್ ಗ್ರೌಂಡ್ ಹತ್ತಿರ 3.0 ಎಂ.ಎಲ್.ಡಿ ಸಾಮರ್ಥ್ಯದ ಮಲೀನ ನೀರು ಶುದ್ಧೀಕರಣ ಘಟಕದ ನಿರ್ಮಾಣದ ಕಾಮಗಾರಿಗೆ 1.70 ಎಕರೆ ವಿಸ್ತೀರ್ಣದ ಜಾಗವನ್ನು ನಗರಸಭೆ ವತಿಯಿಂದ ದಿನಾಂಕ:01.03.2017 ರಂದು ಹಸ್ತಾಂತರಿಸಲಾಗಿದೆ. ಆದರೆ, ಸದರಿ ಜಾಗಕ್ಕೆ ತೆರಳಲು ಸಂಪರ್ಕ ರಸ್ತೆಯು ಅತಿಕ್ರಮಣಗೊಂಡಿರುವುದರಿಂದ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬ ವಾಗಿರುತ್ತದೆ.

2. ಒಳಚರಂಡಿ ಯೋಜನೆಯ ಕಾಮಗಾರಿಗಳ ಪ್ರಗತಿಯ ವಿವರ ಈ ಕೆಳಗಿನಂತಿರುತ್ತದೆ.

**ಪ್ಯಾಕೇಜ್-1 :** ಒಳಚರಂಡಿ ಮಾರ್ಗವನ್ನು ಅಳವಡಿಸಿ ಗೃಹ ಸಂಪರ್ಕವನ್ನು ಒದಗಿಸುವುದು.

| ಕ್ರ. ಸಂ | ವಿವರ | ಟೆಂಡರ್ ಅನುವು | ಪ್ರಗತಿ | ಶೇ |
|---|---|---|---|---|
| 1 | ಸೀವರ್ ಕೊಳವೆ ಮಾರ್ಗ (ಕಿ.ಮೀ) | 109.10 | 69.00 | 63% |
| 2 | ಮ್ಯಾನ್ ಹೋಲ್ (ಸಂಖ್ಯೆ) | 4134 | 2431 | 59% |
| 3 | ಗೃಹ ಸಂಪರ್ಕ (ಸಂಖ್ಯೆ) | 7373 | 3400 | 46% |

**ಪ್ಯಾಕೇಜ್-2 :** 3.0 ಎಂ.ಎಲ್.ಡಿ ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕ ನಿರ್ಮಾಣ ಕಾಮಗಾರಿಗೆ ಮಣ್ಣು ಅಗೆಯುವಿಕೆಯ ಕಾರ್ಯವು ಪೂರ್ಣಗೊಂಡಿರುತ್ತದೆ.

| | | |
|---|---|---|
| ಇ) | ಸದರಿ ಕಾಮಗಾರಿಗಳಿಗೆ ಅಂದಾಜಿಸಲಾಗಿರುವ ಮೊತ್ತವೆಷ್ಟು: ಇದುವರೆಗೂ ಬಿಡುಗಡೆಯಾದ ಅನುದಾನವೆಷ್ಟು: ಖರ್ಚಾದ ಹಣವೆಷ್ಟು ? (ವಿವರ ನೀಡುವುದು) | • ಮಡಿಕೇರಿ ನಗರಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆಯ ಅಂದಾಜು ಮೊತ್ತ ರೂ.4956.00 ಲಕ್ಷಗಳು.<br>• ಬಿಡುಗಡೆಯಾಗಿರುವ ಅನುದಾ ರೂ.2842.79 ಲಕ್ಷಗಳು<br>• ಖರ್ಚಾದ ರೂ.2734.83 ಲಕ್ಷಗಳು |

ಸಂಖ್ಯೆ : ನಅಇ 161 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು